**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯಾಲಯ**
**ಅಫಜಲಪೂರ.**

**ಸಿಸಿ ನಂ.398/2018**

## ದೇವಲಗಾಣಗಾಪೂರ ಪೋಲಿಸ್ ಠಾಣೆ

॥ ವಿರುದ್ಧ ಃ ॥

## ವೆಂಕಟೇಶ್

## ಃ ದೋಷಾರೋಪಣೆ ಃ

ವೆಂಕಟೇಶ ತಂ.ಹೊನ್ನು ಪಾರ್ದಿ
ವಯಸ್ಸುಃ25 ವರ್ಷ, ಉದ್ಯೋಗಃ ಕೂಲಿ
ಸಾ॥ ಸಾವಳಗಿ (ಬಿ), ತಾ॥ಅಫಜಲಪುರ, ಜಿ॥ ಕಲಬುರಗಿ
ಆರೋಪಿತನಾದ ನಿನ್ನ ಮೇಲೆ...

ನಾನು **ಪ್ರಶಾಂತ ಬಾದವಾಡಗಿ,** ಬಿ.ಎ., ಎಲ್ಎಲ್.ಬಿ., (ಸ್ಪೇಷಲ್) ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಅಫಜಲಪುರ. ಆರೋಪಿಸುವುದೇನೆಂದರೆ,

**ದಿನಾಂಕಃ 13.02.2008 ಹಾಗೂ 20.02.2008 ರ ರಾತ್ರಿ ಸಮಯದಲ್ಲಿ ಆರೋಪಿಯಾದ ನೀನು ದೇವಲಗಾಣಗಾಪೂರ ವ್ಯಾಪ್ತಿಯ ಭೀಮಾ ನದಿ ದಂಡಿಗೆ ಇರುವ ಚಾಸಾ-5 ರವರ ಜಮೀನಿನಲ್ಲಿದ್ದ ಚಾಸಾ-6 ರವರ ಪಂಪಸೆಟ್ಟಿಗೆ ಅಳವಡಿಸಿದ ಅಂದಾಜು ರೂ.27,000/- ಕಿಮ್ಮತ್ತಿನ 2200-ಅಡಿ ಉದ್ದದ ಕೇಬಲ ವಾಯರನ್ನು ಶಿವಾಜಿ ತಂ.ರಾಮದಾಸ ಪಾರ್ದಿ ಹಾಗೂ ರಾಜಾ ತಂ.ಸೋಪ್ಯಾ ಪಾರ್ದಿ ರವರ ಜೊತೆ ಸೇರಿ ಅಕ್ರಮ ಲಾಭ ಹೊಂದುವ ಉದ್ದೇಶದಿಂದ ಕಳ್ಳತನ ಮಾಡಿ ಆ ಮೂಲಕ ಭಾರತ ದಂಡ ಸಂಹಿತೆ ಕಲಂಃ 379** ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀ.

ದಿನಾಂಕಃ 23.03.2019 ಜೆ.ಎಮ್.ಎಫ್.ಸಿ., ಅಫಜಲಪೂರ

# <u>ಆರೋಪಿಯ ಹೇಳಿಕೆ.</u>

ಪ್ರ-1 ಮೇಲೆ ಓದಿ ಹೇಳಲಾದ ಆರೋಪಣೆ ಅರ್ಥವಾಯಿತೆ?
ಉಃ

ಪ್ರ-2 ನಿನ್ನ ತಪ್ಪನ್ನು ಒಪ್ಪಿಕೊಳ್ಳುವೀಯಾ ಅಥವಾ ವಿಚಾರಣೆ ಬಯಸುತ್ತೀಯಾ?
ಉಃ

**(ಈ ಮೂಲಕ ದೃಢೀಕರಿಸುವುದೇನೆಂದರೆ ಮೇಲೆ ಹೇಳಿದ ಆರೋಪಣೆಗಳನ್ನು ಆರೋಪಿತನಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಆತನು ನೀಡಿದ ಉತ್ತರವನ್ನು ಯತಾಸ್ಥಿತಿಯಲ್ಲಿ ಬರೆದುಕೊಂಡಿದ್ದು ನಿಜವಿರುತ್ತದೆ)**

ದಿನಾಂಕಃ23-03-2019 **ಜೆಎಮ್ಎಫಸಿ, ಅಫಜಲಪೂರ.**